# ಕಲ್ಯಾಣವೃಷ್ಟಿಸ್ತವಃ - ೨

**ಲಬ್ಧ್ವಾ ಸಕೃತ್ ತ್ರಿಪುರಸುಂದರಿ ತಾವಕೀನಂ**
**ಕಾರುಣ್ಯಕಂದಲಿತ ಕಾಂತಿಭರಂ ಕಟಾಕ್ಷಮ್ ।**
**ಕಂದರ್ಪಕೋಟಿಸುಭಗಾಸ್ತ್ವಯಿ ಭಕ್ತಿಭಾಜಃ**
**ಸಮ್ಮೋಹಯಂತಿ ತರುಣೀರ್ಭುವನತ್ರಯೇಽಪಿ ॥ ೪ ॥**

ಅಮ್ಮಾ, ತ್ರಿಪುರಸುಂದರಿ ದೇವಿಯೆ, ಕಾಂತಿ ಹೊರಹೊಮ್ಮುತ್ತಿರುವ ನಿನ್ನ ಕರುಣಾಪೂರ್ಣ ಕಟಾಕ್ಷವನ್ನು ಒಮ್ಮೆ ಪಡೆದವರು ಕೋಟಿ ಮನ್ಮಥರ ಸೌಂದರ್ಯವನ್ನು ಮೀರಿದ ಸೌಂದರ್ಯವನ್ನು ಹೊಂದುವರು. ನಿನ್ನಲ್ಲಿ ಭಕ್ತಿ ಹೊಂದಿರುವ ಅವರು ಮೂರು ಲೋಕದ ತರುಣಿಯರನ್ನೂ ಮೋಹಗೊಳಿಸಬಲ್ಲರು.

**ಹ್ರೀಂಕಾರಮೇವ ತವ ನಾಮ ಗೃಣಂತಿ ವೇದಾಃ**
**ಮಾತಸ್ತ್ರಿಕೋಣನಿಲಯೇ ತ್ರಿಪುರೇ ತ್ರಿನೇತ್ರೇ ।**
**ತ್ವತ್ಸಂಸ್ಮೃತೌ ಯಮಭಟಾಭಿಭವಂ ವಿಹಾಯ**
**ದೀವ್ಯಂತಿ ನಂದನವನೇ ಸಹ ಲೋಕಪಾಲೈಃ ॥ ೫ ॥**

ಅಮ್ಮಾ, ವೇದಗಳು ಹ್ರೀಂಕಾರವನ್ನು ನಿನ್ನ ನಾಮವೆಂದು ಹೇಳುತ್ತವೆ. ತ್ರಿಕೋಣದಲ್ಲಿ ವಾಸಿಸುವ ಮೂರು ನಯನಗಳ ದೇವಿ ತ್ರಿಪುರೇ, ನಿನ್ನನ್ನು ಸ್ಮರಿಸುವವರನ್ನು ಯಮಭಟರು ಬಿಟ್ಟು ಓಡಿಹೋಗುವರು ಮತ್ತು ಅವರು ಲೋಕಪಾಲಕರೊಡನೆ ನಂದನ ವನದಲ್ಲಿ ವಿಹರಿಸುವರು (ದಿವ್ಯಲೋಕಗಳನ್ನು ಹೊಂದುವರು.)

**ಹಂತುಃ ಪುರಾಮಧಿಗಲಂ ಪರಿಪೀಯಮಾನಃ**
**ಕ್ರೂರಃ ಕಥಂ ನ ಭವಿತಾ ಗರಲಸ್ಯ ವೇಗಃ ।**
**ನಾಶ್ವಾಸನಾಯ ಯದಿ ಮಾತರಿದಂ ತವಾರ್ಧಂ**
**ದೇಹಸ್ಯ ಶಶ್ವದಮೃತಾಪ್ಲುತಶೀತಲಸ್ಯ ॥ ೬ ॥**



ತ್ರಿಪುರ ಸಂಹಾರಿಯಾದ ಶಿವನು ಹಾಲಾಹಲವನ್ನು ಕುಡಿದಾಗ, ಆತನ ಅರ್ಧದೇಹವನ್ನು ಅಲಂಕರಿಸಿರುವ ನಿನ್ನ ಅಮೃತ ಶೀತಲ ಸ್ಪರ್ಶದಿಂದ ಶಿವನಲ್ಲಿ ವಿಷದ ವೇಗವು ಕ್ರೂರವಾಗಲಿಲ್ಲ. (ಶಿವನನ್ನು ಬಾಧಿಸಲಿಲ್ಲ).

— ಶ್ರೀಶಂಕರಾಚಾರ್ಯ

## ಸೂಕ್ತಿಪ್ರಭ — ಕನ್ನಡ ಸೂಕ್ತಿಗಳು

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಬಂಧುಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಜಗದೀಶನು ॥

— ಪುಣ್ಯಕೋಟಿಯ ಕಥೆ

ಅಡವಿಯಾರಣ್ಯದಲಿ ಮಡಿವನಕ ತಪವಿದ್ದು
ಮಡಿವಾಗ ಮೃಡನ ಮರೆದಡೆ - ತುಂಬಿದ ಸಕ್ಕರೆಯ
ಮಡುವಿನೊಳಗೊಕ್ಕಂತೆ ರಾಮನಾಥ.

— ದೇವರ ದಾಸಿಮಯ್ಯ

ಹೃದಯ ಜೀವನ ಹಳೆಯ ನೀರಿನ ಕೊಳಕು ಕೊಳವಾಗದಿರಲಿ. ಯಾವಾಗಲೂ ಹೊಸ ನೀರು ಬಂದು ಹರಿಯುತ್ತಿರುವ ಸ್ವಚ್ಛಸಲಿಲ ಸ್ರೋತವಾಗಿರಲಿ.

— ಕುವೆಂಪು

ಗಿಳಿಗಳ ಹಿಂಡು ದಾರಿ ನಡುವೆ ಯಾವುದೋ ತೋಟವನ್ನು ಕಂಡು, ಸ್ವಲ್ಪ ಹೊತ್ತು ಅಲ್ಲಿದ್ದು ಬಳಿಕ ಹಾರಿ ಹೋಗುತ್ತವೆ. ಅಷ್ಟಕ್ಕೆ ಆ ಗಿಳಿಗಳು ತೋಟಕ್ಕೆ ಸೇರುತ್ತವೆಯೆ ? (ಅದೇ ರೀತಿ ನನ್ನ ಕವಿತೆಗಳು - ನನ್ನೆದೆಯಲ್ಲಿ ಕ್ಷಣಕಾಲ ಇರುತ್ತವೆ.)

— ಎಂ. ಗೋವಿಂದ ಪೈ